ನಂಟು 3 ದಶಕಗಳದ್ದು. ಬೀದಿಯಲ್ಲಿ ವಾದ್ಯ ನುಡಿಸಿ ಹಾಡುತ್ತಿದ್ದ ನಮ್ಮನ್ನು ವೇದಿಕೆ ಹತ್ತಿಸಿದ್ದೇ ಮಹದೇವಸ್ವಾಮಿ. ಅರ್ಜುನನ ಹಾಡು ಕಥೆ ರೆಕಾರ್ಡಿಂಗ್ ಆದ ದಿನ ನನಗೆ ಈಗಲೂ ನೆನಪಿದೆ. ಮುಂದೊಂದು ದಿನ ಈ ಗೀತೆ ಈ ರೀತಿ ಅಬ್ಬರ ಸೃಷ್ಟಿಸುತ್ತದೆ ಎಂದು ನಾನು ಎಣಿಸಿರಲಿಲ್ಲ' ಎಂದು ನಂಜುಂಡಸ್ವಾಮಿ ಹಳೆಯ ನೆನಪುಗಳನ್ನು ಚಪ್ಪರಿಸುತ್ತಾರೆ.

ಕಂಸಾಳೆ ನುಡಿಸಿರುವ ಪೂರಿಗಾಲಿಯ ಶಿವನಂಜಯ್ಯ ಅವರೂ ಮೃತಪಟ್ಟಿದ್ದಾರೆ. ಮಳವಳ್ಳಿ ಭೈರಪ್ಪ ಅವರು ಘಟಂ ನುಡಿಸಿದ್ದಾರೆ. ಪೂರಿಗಾಲಿಯ ಇನ್ನೊಬ್ಬ ಕಲಾವಿದ ಕರಿಬುಗ್ಗಯ್ಯ ತಾಳ ನುಡಿಸುವ ಮೂಲಕ 'ಅನ್ಯಾಯಕಾರಿ ಬ್ರಹ್ಮ' ಗೀತೆಗೆ ರೂಪ ಕೊಟ್ಟಿದ್ದಾರೆ.

'ಮಳವಳ್ಳಿ ಶಿವಪ್ಪ, ಕೊಳತ್ತೂರು ನಂಜುಂಡಸ್ವಾಮಿ, ಪೂರಿಗಾಲಿಯ ಶಿವನಂಜಯ್ಯ, ಭೈರಪ್ಪ, ಕರಿಬುಗ್ಗಯ್ಯ ಅವರೊಂದಿಗೆ ಮಳವಳ್ಳಿ ಮಹದೇವಸ್ವಾಮಿ ಕುಳಿತರೆಂದರೆ ಹಗಲು–ರಾತ್ರಿಗಳ ವ್ಯತ್ಯಾಸ ತಿಳಿಯುತ್ತಿರಲಿಲ್ಲ. ಜನರು ತುಂಬಿ ಬರುತ್ತಿದ್ದರು, ರಾತ್ರಿಯಿಡೀ ಕಥೆ ಕೇಳುತ್ತಿದ್ದರು. ಅರ್ಜುನನ ಜೋಗಿ ಹಾಡು ಸೇರಿದಂತೆ ಹಲವು ಜನಪದ ಕಥೆಗಳಿಗೆ ಈ ತಂಡ ಜೊತೆಯಾಗಿದೆ' ಎಂದು ಕಲಾವಿದ ಚಂದ್ರಶೇಖರ್ ಹೇಳುತ್ತಾರೆ.

### ಡಿಜಿಟಲ್ ಪ್ರಭೆಯಲ್ಲಿ ಜನಪದ

'ಅನ್ಯಾಯಕಾರಿ ಬ್ರಹ್ಮ' ಗೀತೆ ವೈರಲ್ ಆದ ನಂತರ,

## ಸ್ವಚ್ಛ ಪ್ರೀತಿಯ ಗೀತೆಗೆ ಉತ್ತಮ ಪ್ರತಿಕ್ರಿಯೆ

'ಡಬ್ಬಲ್ ಮೀನಿಂಗ್' ಹಾಡು ಹೇಳುವವರು ರಾತ್ರಿ ಬೆಳಗಾಗುವುದರೊಳಗಾಗಿ ಸೆಲೆಬ್ರಿಟಿಗಳಾಗುತ್ತಾರೆ. ಆದರೆ, ಮೂಲ ಜನಪದ ಹಾಡುತ್ತಿರುವ ಮಳವಳ್ಳಿ ಮಹದೇವಸ್ವಾಮಿ ಅವರು ಜಗತ್ತಿಗೆ ತಿಳಿಯಬೇಕಾದರೆ ಅರ್ಧ ಶತಮಾನ ಬೇಕಾಯಿತು. ಈ ಸಾಮಾಜಿಕ ಜಾಲತಾಣಗಳ ಯುಗದಲ್ಲಿ ಜನಪದ ಗೀತೆಯೊಂದು ಯುವಜನರನ್ನು ಆವರಿಸಿಕೊಂಡ ಬಗೆ ಸಂತೋಷ ತರಿಸುತ್ತದೆ. ಹೀಗಾಗಿ ಮಹದೇವಸ್ವಾಮಿ ಅವರಿಗೆ ಅಭಿನಂದನೆ ಹೇಳಲೇಬೇಕು.



'ಅನ್ಯಾಯಕಾರಿ ಬ್ರಹ್ಮ' ಗೀತೆಯಲ್ಲಿ ಸ್ವಚ್ಛ ಪ್ರೀತಿ ಇದೆ. ಸ್ವಚ್ಛ ಪ್ರೀತಿಯ ಹಾಡುಗಳನ್ನು ಯಾರೇ ಕೇಳಿದರೂ ಅವರ ಹೃದಯ ತಟ್ಟುತ್ತವೆ. ಜಾನಪದದಲ್ಲಿ ಅಂತಹ ಸಾವಿರಾರು ಗೀತೆಗಳಿವೆ, ಅವುಗಳನ್ನು ಯುವಜನರು ಕೇಳಬೇಕು, ಓದಬೇಕು. ಭಾವನೆಗಳನ್ನು ಕೆರಳಿಸುವ, ಮನಸ್ಸನ್ನು ಉದ್ರೇಕಗೊಳಿಸುವ ಹಾಡುಗಳು ನಮ್ಮ ಕಿವಿಗೆ ನಿತ್ಯವೂ ಕೇಳಿಸುತ್ತವೆ. ಅವುಗಳನ್ನು ಜನರು ಬಲುಬೇಗನೆ ಮರೆತುಬಿಡುತ್ತಾರೆ. ಆದರೆ, ಭಾವನೆಗಳನ್ನು ಹೂವಿನಂತೆ ಅರಳಿಸುವ ಹಾಡು ಅನ್ಯಾಯಕಾರಿ ಬ್ರಹ್ಮ ಆಗಿತ್ತು, ಹೀಗಾಗಿ ಯುವಜನರು ಅದಕ್ಕೆ ಪ್ರತಿಸ್ಪಂದಿಸಿದರು.

'ಎಲ್ಲೋ ಜೋಗಪ್ಪ ನಿನ್ನರಮನೆ' ಗೀತೆಯಲ್ಲೂ ಸ್ವಚ್ಛ ಪ್ರೀತಿ ಇದೆ. ಹೀಗಾಗಿ ಅದು ಕೂಡ ಜನರಿಗೆ ಇಷ್ಟವಾಗುತ್ತದೆ. ಕುಸುಮಾಲೆ– ಬಿಳಿಗಿರಿ ರಂಗನಾಥನ ನಡುವಿನ ಪ್ರೀತಿಯ ಗೀತೆಗಳು ಕೂಡ ಮನಸ್ಸಿಗೆ ಮುದ ನೀಡುತ್ತವೆ. ಜನಪದ ಕಾವ್ಯಗಳಲ್ಲಿ ಬರುವ ಪ್ರೀತಿ ಪ್ರಸಂಗದ ಸನ್ನಿವೇಶಗಳು ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತವೆ. ಅದರಲ್ಲೂ ಇಂದಿನ ಆಧುನಿಕ ಕಾಲಘಟ್ಟಕ್ಕೆ ಶುದ್ಧ ಸಮಾಜ, ಶುದ್ಧ ಪ್ರೀತಿ, ಶುದ್ಧ ಅಂತಃಕರಣದ ಸಂದೇಶ ನೀಡುವ ನೂರಾರು ಪ್ರಸಂಗ, ಗೀತೆ, ಕತೆ, ಉಪಕಥೆಗಳು ಜಾನಪದ ಕಾವ್ಯದಲ್ಲಿವೆ. ಅವುಗಳನ್ನು ಯುವಜನರು ಕೇಳಿಸಿಕೊಂಡರೆ, ಓದಿಕೊಂಡರೆ ಉತ್ತಮ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯವಿದೆ.

**–ಪಿಚ್ಚಳ್ಳಿ ಶ್ರೀನಿವಾಸ್,** ಗಾಯಕ

